Arka Foundation India

SRINIVAS ARKA

"Our future depends mainly on the way we think at present. To change our lives, we must change the way we think."

Quote from the book '**Petals of the Heart**' by:

Srinivas Arka

Philosopher, Author & Sanskrit Scholar, Pioneer of Arka Dhyana, an Intuitive meditation practice, Founder of the Arka Foundation, India and Centre for Conscious Awareness, globally, to promote natural living

Newsletter February 2022

16 February 2022
Visit to Vinyas IT company
Mysore

Srinivas Arka was invited by Mr Narendra, Chairman of Vinyas IT, which is a leading Electronic System Design and Manufacturing Service Company. Yogi Arka visited the complete shop floor and had a brief view of the complete work flow.

Yogi Arka had an interactive session with a few key members of Vinyas IT, where he explained the meaning of the Mantra: *"Prasanna Vadanam Dhyayet, Sarva Vighnopa Shantaye"*, with which all the Vinyas IT team members were inspired.

20 February 2022

Kannada Books Launch

Organised by Niruta Publications, Kannada Sahitya Parishat, Chamarajper, Bangalore

Srinivas Arka was invited as a Chief Guest by Niruta Publications in association with Bengaluru Universities Social Work Alumni Association for the launch of three Kannada books on Sunday 20th February 2022 at 10am, at the Kannada Sahitya Parishat Auditorium, Pampa Mahakavi Road, Chamarajpet, Bangalore.

The three Kannada books titled: "*Samajika Kriyacharane*" written by Dr C R Gopal, "Shikshana Ratha Neeti Patha" written by Sri H N Yadhavada, and "Mano-Vaidyakeeya Samajakarya" written by Dr Lokesh M U & Srimati Pavitra A V, were launched by Srinivas Arka.

Yogi Arka gave an illuminating talk appreciating the authors for their excellent work with their books. He brilliantly conveyed the essence of each of the books, the first one on the importance of social action, the second one on the role of parents in educating a child in the social scenario, and the third one on the mental health aspect of social work.

The event was presided by a special guest, Srimati Rooth Manorama, a dedicated social worker and Right Livelihood award winner. She spoke highly of the books and practical aspects of social work.

Chief Guest Srinivas Arka was felicitated and thanked by the organisers for having graced the occasion with his presence.

The publisher of the books Sri Ramesha M H of Niruta Publications and Niratanka Trust, spoke a few words about their publishing experience over the years and thanked everyone for their support.

20 February 2022

Awards function for Outstanding Achievers in Yoga

Organised by District Kannada Sahitya Parishat, Mysore and Himalaya Pratishtana

'Yoga Vibhushana' award for Srinivas Arka

The annual awards function for outstanding achievers in Yoga was organised jointly by District Kannada Sahitya Parishat, Mysore and Himalaya Pratishtana, in the cultural city of Mysore, on the 20th February 2022 evening. The very presence of Yogi Arka was an added charm, like a 'Jewel in the Crown' for the awards function this year.

In this profound programme, Srinivas Arka was recognized for more than three decades of his dedicated service in the spiritual field of Yoga and Dhyana, and was honoured with the prestigious **'Yoga Vibhushana'** award. Yogi Arka has been travelling worldwide over the years, disseminating the essence of the ancient traditional philosophy of India, sharing his spiritual knowledge and experiences with people, and in turn humbly serving Mother India.

In his wonderful words addressing the audience, Srinivas Arka expressed his appreciation and gratefulness for the immense service rendered by the ancient *Rishi-Munis* (sages) of India. The audience were spellbound in awe, honour and respect to Yogi Arka, as they listened to the charismatic pearls of wisdom that emanated from him.

The 'Yoga Bhushana' awards were conferred on Srimati Devaki Madhavan (a senior achiever of Yoga in Mysore), Srimati Geeta Kumar, Vinay, Narasimha Shetty, Rakesh Jain and Ravi Prabhakar for their respective outstanding achievements in Yoga.

The President of District Kannada Sahitya Parishat, Mysore - Sri Maddikere Gopal, and the President of Himalaya Pratishtana - Sri N Anantha, conducted the awards programme proficiently.

16 ಫೆಬ್ರವರಿ 2022 - ಮೈಸೂರು

ವಿನ್ಯಾಸ ಐಟಿ ಸಂಸ್ಥೆಗೆ ಯೋಗಿ ಶ್ರೀನಿವಾಸ ಅರ್ಕ ಭೇಟಿ

ಮೈಸೂರಿನ ಪ್ರತಿಷ್ಠಿತ ಎಲೆಕ್ಟ್ರಾನಿಕ್ಸ್ ಉಪಕರಣಗಳ ಉದ್ಯಮ ಸಂಸ್ಥೆ *ವಿನ್ಯಾಸ್ ಐಟಿ* ಗೆ ಯೋಗಿ ಶ್ರೀನಿವಾಸ ಅರ್ಕ ಇದೇ ಫೆಬ್ರವರಿ 16ರಂದು ಭೇಟಿ ಕೊಟ್ಟಿದ್ದರು. ವಿನ್ಯಾಸ್ ಐಟಿಯ ಚೇರ್ಮನ್ ನರೇಂದ್ರ ಅವರ ಆಹ್ವಾನದ ಮೇರೆಗೆ ಆ ಸಂಸ್ಥೆಗೆ ಭೇಟಿ ಕೊಟ್ಟ ಯೋಗಿಜಿ, ಅದರ ಪ್ರಮುಖರೊಂದಿಗೆ ಸಂವಾದ ಮಾಡಿ ಅವರಿಗೆ ಸ್ಫೂರ್ತಿ ತುಂಬಿದರು. ಮಂತ್ರಶಾಸ್ತ್ರ, ಅದರ ಮಹತ್ವದ ಬಗ್ಗೆ ಕಿರು ಪರಿಚಯ ಮಾಡಿಕೊಟ್ಟ ಯೋಗಿಜಿ, *ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪ ಶಾಂತಯೇ* ಎಂಬ ವಿನಾಯಕನ ಕುರಿತಾದ ಸಂಸ್ಕೃತ ಶ್ಲೋಕ ಹೇಳಿ ಅದರ ಅಂತರಾರ್ಥ ವಿವರಿಸಿದರು. ಶ್ರೀನಿವಾಸ ಅರ್ಕ ಅವರ ಮಾತುಗಳು, ಸಂಸ್ಥೆಯ ಸದಸ್ಯರಿಗೆ ಸ್ಫೂರ್ತಿ ತುಂಬಿದವು.

20 ಫೆಬ್ರವರಿ 2022 - ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ ನಲ್ಲಿ ಮೊಳಗಿದ ಸಾಮಾಜ ರಕ್ಷಣೆಯ ಘೋಷ!

ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ ಸಾಮಾಜಿಕ ಚಿಂತನೆಯ ತರಂಗಗಳಿಂದ ತುಂಬಿ ತುಳುಕುತ್ತಿತ್ತು. ಸಮಾಜದ ಬಗ್ಗೆ ಸದಾ ಕಾಳಜಿ ಹೊಂದಿ ಇಂದಿನ ಬದಲಾಗುತ್ತಿರುವ ಸಮಾಜದ ಸ್ವಾಸ್ಥ್ಯ ಕಾಪಾಡುವುದು ಹೇಗೆ ಎಂದು ಯೋಚಿಸುತ್ತಾ, ಅದರ ಸುಧಾರಣೆಗೆ ಮುಂದಾದ ಸಹೃದಯಿಗಳ ಸಮಾಗಮ ಅಲ್ಲಿ ಆಗಿತ್ತು. ಹೌದು, ಈ ಕಾರ್ಯಕ್ರಮದಲ್ಲಿ ಮೂರು ಸಾಮಾಜಿಕ ಕಳಕಳಿಯ ಪುಸ್ತಕಗಳು ಲೋಕಾರ್ಪಣೆಗೊಂಡವು. ಬೆಂಗಳೂರು ಯೂನಿವರ್ಸಿಟಿ ಸೋಷಿಯಲ್ ವರ್ಕ್ ಅಲೂಮ್ನಿ ಅಸೋಸಿಯೇಷನ್ ನ ಸಹಯೋಗದೊಂದಿಗೆ ನಿರುತ ಪಬ್ಲಿಕೇಷನ್ ಹಮ್ಮಿಕೊಂಡಿದ್ದ ಈ ಅದ್ಭುತ ಕಾರ್ಯಕ್ರಮದಲ್ಲಿ ವಿಶ್ವಪ್ರಸಿದ್ಧ ಆಧ್ಯಾತ್ಮ ಚಿಂತಕ, ಯೋಗಿ ಶ್ರೀನಿವಾಸ ಅರ್ಕ ಅವರು ಪ್ರಮುಖ ಅತಿಥಿಯಾಗಿ ಪಾಲ್ಗೊಂಡು ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದವರು ರೈಟ್ ಲೈವ್ ಲಿಹುಡ್ ಪ್ರಶಸ್ತಿ ವಿಜೇತರು, ಸಾಮಾಜಿಕ ಕಾರ್ಯಕರ್ತರಾದ ಶ್ರೀಮತಿ ರೂತ್ ಮನೋರಮಾ. ಈ ಸಂದರ್ಭದಲ್ಲಿ ಸಾಮಾಜಿಕ ಕ್ರಿಯಾಚರಣೆ, ಶಿಕ್ಷಣ ರಥ ನೀತಿ ಪಥ ಮತ್ತು ಮನೋ-ವೈದ್ಯಕೀಯ ಸಮಾಜ ಕಾರ್ಯ ಕೃತಿಗಳ ಲೋಕಾರ್ಪಣೆ ಮಾಡಲಾಯಿತು. ಪುಸ್ತಕಗಳ ಲೇಖಕರಾದ ಡಾ.ಸಿ. ಆರ್. ಗೋಪಾಲ್, ಎಚ್.ಎನ್.ಯಾದವಾಡ, ಮತ್ತು ಡಾ.ಲೋಕೇಶ್ ವೇದಿಕೆ ಅಲಂಕರಿಸಿದ್ದರು. ಪುಸ್ತಕಗಳ ಕುರಿತು ಮಾತನಾಡಿದ ಯೋಗಿ ಶ್ರೀನಿವಾಸ ಅರ್ಕ, ಸಮಾಜವನ್ನು ತಿದ್ದುವಲ್ಲಿ ಹಾಗೂ ಯುವ ಜನರಲ್ಲಿ ಸೂಕ್ತ ಸಾಮಾಜಿಕ ಪ್ರಜ್ಞೆ ಬೆಳೆಸುವಲ್ಲಿ ಈ ಪುಸ್ತಕಗಳು ಪ್ರಮುಖ ಪಾತ್ರ ನಿರ್ವಹಿಸಲಿವೆ ಎಂದು ಹೇಳಿದರು. ಇನ್ನು ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿ ಬರುವಲ್ಲಿ ನಿರುತ ಪಬ್ಲಿಕೇಷನ್ಸ್ ನ ರಮೇಶ್ ಹಾಗೂ ಸಂಗಡಿಗರು ವಹಿಸಿದ ಶ್ರಮ ಸಾರ್ಥಕವಾಯ್ತು.

20 ಫೆಬ್ರವರಿ 2022 - ಮೈಸೂರು

ಮಹಾಗುರು ಯೋಗಿ ಶ್ರೀನಿವಾಸ ಅರ್ಕ ಅವರ ಕಿರೀಟಕ್ಕೆ ಯೋಗವಿಭೂಷಣ ಗರಿ!

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಫೆ.20ರಂದು ಹಿಮಾಲಯ ಪ್ರತಿಷ್ಠಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಯೋಗ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಯೋಗ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಪ್ರತಿವರ್ಷ ಇಂತಹ ಕಾರ್ಯಕ್ರಮವನ್ನು ಹಿಮಾಲಯ ಪ್ರತಿಷ್ಠಾನ ಆಯೋಜಿಸುತ್ತಿದ್ದು, ಈ ಬಾರಿ ಈ ಪ್ರಶಸ್ತಿ ಸಮಾರಂಭಕ್ಕೆ ಇನ್ನಷ್ಟು ಮೆರಗು ತಂದವರು ಯೋಗಿ ಶ್ರೀನಿವಾಸ ಅರ್ಕ. ಹೌದು, ಈ ವರ್ಷದ ಹಿಮಾಲಯ ಪ್ರತಿಷ್ಠಾನದ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಶ್ರೀನಿವಾಸ ಅರ್ಕ ಅವರು ಭಾರತೀಯ ಆಧ್ಯಾತ್ಮ ಹಾಗೂ ಯೋಗ ಕ್ಷೇತ್ರಕ್ಕೆ ಸಲ್ಲಿಸಿದ ಮೂರು ದಶಕಗಳ ಸೇವೆ ಗುರುತಿಸಿ ಅವರಿಗೆ **ಯೋಗ ವಿಭೂಷಣ** ಪ್ರಶಸ್ತಿ ನೀಡಿ ಗೌರವಿಸಲಾಯ್ತು. ಯೋಗಿ ಶ್ರೀನಿವಾಸ ಅರ್ಕ ಅವರು ದೇಶ ವಿದೇಶಗಳಲ್ಲಿನ ಜಿಜ್ಞಾಸುಗಳಿಗೆ ಭಾರತೀಯ ಸನಾತನ ಪರಂಪರೆ, ಯೋಗ ಹಾಗೂ ಭಾರತೀಯ ಜ್ಞಾನವನ್ನು ಹಂಚುತ್ತಾ ತಾಯಿ ಭಾರತಿಯ ಸೇವೆಯನ್ನು ಮಾಡುತ್ತಿದ್ದಾರೆ. ಇನ್ನು ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಯೋಗಿ ಶ್ರೀನಿವಾಸ ಅರ್ಕ ಅವರು ಭಾರತೀಯ ಋಷಿಮುನಿಗಳ ಕೊಡುಗೆಯನ್ನು ಕೊಂಡಾಡಿದರು. ಯೋಗಿಗಳ ಒಂದೊಂದು ಮಾತೂ ನಿಜಕ್ಕೂ ಅದ್ಭುತ. ಅವರ ಜ್ಞಾನವಾಣಿಗೆ ಸಭೆ ತಲೆದೂಗಿತು. ಇನ್ನು ಇದೇ ಕಾರ್ಯಕ್ರಮದಲ್ಲಿ ಮೈಸೂರಿನ ಹಿರಿಯ ಯೋಗ ಸಾಧಕರಾದ ಶ್ರೀಮತಿ ದೇವಕಿ ಮಾಧವನ್, ಶ್ರೀಮತಿ ಗೀತಾ ಕುಮಾರ್, ವಿನಯ್, ನರಸಿಂಹ ಶೆಟ್ಟಿ, ರಾಕೇಶ್ ಜೈನ್ ಹಾಗೂ ರವಿ ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಾಹಿತ್ಯ ಪರಿಷತ್ ನ ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್ ಹಾಗೂ ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷರಾದ ಎನ್. ಅನಂತುರವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರ್ವಹಿಸಿದರು.